

ಜಗತ್ತಿನಲ್ಲಿ ಷಂಡರ ಸಂಖ್ಯೆ ತೀವ್ರಗತಿಯಲ್ಲಿ ಬೆಳೆದು ಅಲ್ಲೋಲಕಲ್ಲೋಲ ಆಗುತ್ತದೆ. ಈ ವಿಷಯದಲ್ಲಿ ನಾನು ಈಗಾಗಲೇ ಕಾಮದೇವನಿಗೆ ವರ ನೀಡಿದ್ದೇನೆ, ನೀನು ಅವನನ್ನು ಪ್ರಾರ್ಥಿಸಿ ಅದರ ಇತಿಮಿತಿಗಳ ಬಗ್ಗೆ ಕೇಳಿಕೋ' ಅಂದ.

ನಾನು ಅತೃಪ್ತಿಯಿಂದ ದೇವರ ಮುಖ ನೋಡುತ್ತ ಮತ್ತೊಂದು ಪ್ರಶ್ನೆ ಕೇಳಿದೆ. 'ದೇವಾ ನಿನ್ನ ಹೆಸರಿನಲ್ಲಿ ಭೂಮಿಯ ಮೇಲೆ ಅನೇಕ ಮತ, ಪಂಥ, ಧರ್ಮ ಜಾತಿ, ಗುಡಿ- ಗುಂಡಾರಗಳು ನಿರ್ಮಾಣಗೊಂಡು ಭೂಲೋಕದ ಜನ ತಮ್ಮ ತಮ್ಮೊಳಗೆ ನಿನ್ನ ಹೆಸರಿನಲ್ಲಿ ಪರಸ್ಪರ ಕಚ್ಚಾಡಿಕೊಂಡು ದ್ವೇಷ ಸಾಧಿಸುತ್ತಾ ಪರಸ್ಪರರ ವಿನಾಶಕ್ಕೆ ನಿತ್ಯ ಅನೇಕ ರೀತಿಯ ಕುಕೃತ್ಯಗಳಲ್ಲಿ ತೊಡಗಿದ್ದಾರೆ. ಆದ್ದರಿಂದ ಭೂಮಿಯ ಮೇಲೆ ಪರಸ್ಪರ, ದ್ವೇಷ, ಅಸೂಯೆಗಳಿಗೆ, ದುರಾಚಾರಕ್ಕೆ ಮೂಲವಾದ ಮತ, ಪಂಥಗಳನ್ನು ತೊಡೆದು ಹಾಕು, ಧರ್ಮಗ್ಲಾನಿಯಾದಾಗ ನೀನೇ ಅವತರಿಸಿ ಬಂದು ಎಲ್ಲವನ್ನು ವ್ಯವಸ್ಥೆಗೊಳಿಸುವುದಾಗಿ ಹೇಳಿಲ್ಲವೇ' ಅಂದೆ. 'ಈ ಬಗ್ಗೆ ಬೇರೆಬೇರೆ ಕ್ಷೇತ್ರಾಧಿಪತಿಗಳೊಂದಿಗೆ ಚರ್ಚಿಸಬೇಕು, ನಾವು ಜಗತ್ತಿನಲ್ಲಿ ಆಗಾಗ ಅಲ್ಲಲ್ಲಿ ನಮ್ಮ ಪ್ರತಿನಿಧಿಗಳನ್ನು ಮನುಷ್ಯರಿಗೆ ಸದ್ಬೋಧನೆ ಮಾಡಲು ಕಳಿಸಿರುತ್ತೇವೆ. ನೀವು ಅವರ ಮಾತು ಕೇಳದೆ ವಿನಾಶದಲ್ಲಿ ಮುಳುಗಿ ಮತ್ತೇ ನಮ್ಮ ಕಡೆ ಬರುತ್ತೀರಿ. ಈಗ ಯಾಂತ್ರಿಕ ಬುದ್ಧಿಮತ್ತೆ ಮೂಲಕ ನಮ್ಮನ್ನೇ ಮೀರಲು ಪ್ರಯತ್ನಿಸುತ್ತಿದ್ದೀರಿ. ಸ್ವಲ್ಪ ತಡೆಯಿರಿ, ಆ ಭಸ್ಮಾಸುರನಂತೆ ನೀವು ನಾಶ ಹೊಂದುವಿರಿ' ಅಂದ. ನನಗೆ ಚಿಂತೆ ಆಯಿತು. ಇನ್ನೇನಾದರೂ ಕೇಳಿದರೆ ಅತಿಯಾಸೆ ಗತಿ ಗೆಡಿಸಬಹುದು ಎಂದು ತಲೆ ತಗ್ಗಿಸಿ ಕುಳಿತೆ. ಆದರೂ ದೇವರು, 'ನಿನ್ನ ಕಾಳಜಿ ನನಗೆ ಅರ್ಥವಾಗುತ್ತದೆ. ನಿನ್ನ ಸ್ವಂತಕ್ಕೆ ಏನಾದರೂ ಕೇಳು, ಈ ಹಿಂದೆ ತಪಸ್ಸು ಮಾಡಿದವರೆಲ್ಲ ತಮಗೇ ಮಾತ್ರ ವರ ಕೇಳಿ ಪಡೆದಿದ್ದಾರೆ' ಎಂದು ಕರುಣೆ ತೋರಿದ. ಆಗ ನಾನು 'ದೇವಾ ನಮ್ಮ ದೇಶದ ರಾಜಕಾರಣಿಗಳು ಬ್ರಹ್ಮಾಂಡ ಭ್ರಷ್ಟತೆಯಲ್ಲಿ ತೊಡಗಿ, ನಿತ್ಯ ಕಚ್ಚಾಡುತ್ತಾ ದಾರಿ ತಪ್ಪಿದ್ದಾರೆ, ಜನರನ್ನೂ ದಾರಿ ತಪ್ಪಿಸುತ್ತಿದ್ದಾರೆ, ಪರಸ್ಪರ ದ್ವೇಷ, ಅಸೂಯೆ ಹೆಚ್ಚಾಗಿದೆ, ಅವರಿಗೆ ಸದ್ಬುದ್ಧಿ ಕೊಡು, ಇದನ್ನೆಲ್ಲ ಸರಿಪಡಿಸು' ಎಂದೆ.

ಅದಕ್ಕಾದರೂ ದೇವರು ತಥಾಸ್ತು ಅನ್ನಬಹುದು ಅಂದುಕೊಂಡೆ. ನನ್ನ ಕೋರಿಕೆ ಕೇಳಿ ದೇವರೂ ಯೋಚನೆಗೆ ಬಿದ್ದು ಚಿಂತಾಕ್ರಾಂತನಾದಂತೆ ಕಂಡ. ಕ್ಷಣ ತಡೆದು 'ಪಾಕಲಾಂ' ಅಂದ. 'ಅಂದರೆ ಏನು ದೇವಾ' ಅಂದೆ. 'ಅದರ ಅರ್ಥವನ್ನು ನೀನೇ ನೋಡಿಕೋ' ಎಂದು ದೇವರು ಅದೃಶ್ಯನಾದ. ದೇವರು ಕೂಡ ಪಲಾಯನವಾದಿ ಆಗಿದ್ದಾನೆ, ಭೂಲೋಕದ ಸಮಸ್ಯೆಗಳಿಗೆ ಸ್ಪಂದಿಸುವ ಶಕ್ತಿ ಅವನಲ್ಲೂ ಉಳಿದಂತಿಲ್ಲ ಅಂದುಕೊಂಡೆ.

ಕನಸಿನ ಕೊನೆಗೆ ನಾನು ಬಡಬಡಿಸಿದೆನೆಂದು ಕಾಣುತ್ತದೆ. ಮಡದಿ ಮೈತಟ್ಟಿ ಎಚ್ಚರಿಸಿದಳು. 'ಯಾಕ್ರೀ ಏನಾತು ಯಾಕ ಬಡಬಡಿಸತ್ತಿದ್ರಿ?' ಎಂದು ಕೇಳಿದಳು. ನಾನು ಸ್ವಲ್ಪ ನಿಧಾನಕ್ಕೆ ವಾಸ್ತವಕ್ಕೆ ಬಂದು 'ಕನಸು ಬಿದ್ದಿತ್ತು, ಕನಸಿನಲ್ಲಿ ದೇವರು ಬಂದಿದ್ದ' ಎಂದೆ. 'ನಿಮ್ಮ ಬೇಡಿಕೆಗಳಿಗೆಲ್ಲ ದೇವರು ತಥಾಸ್ತು ಅಂದನೆ' ಎಂದು ಕೇಳಿದಳು. 'ಇಲ್ಲ, ದೇವರು ಈಗ ಕೇಳಿದ್ದಕ್ಕೆಲ್ಲ ತಕ್ಷಣ ತಥಾಸ್ತು ಅನ್ನುವುದಿಲ್ಲ, ಪಾಕಲಾಂ ಎಂದು ಅಂದು ಹೋದ' ಅಂದೆ. 'ಅಂದರೆ ದೇವರೂ ಈಗ ರಾಜಕಾರಣಿಗಳಂತೆ ನೋಡೋಣ, ಮಾಡೋಣ ಎಂದು ಅನ್ನಲಿಕ್ಕೆ ಶುರು ಮಾಡಿದಂಗಾತು' ಅಂದಳು.

ದೇವರ ಮಾತಿನ ಮರ್ಮ ಅವಳಿಗೆ ಅರ್ಥವಾಗಿತ್ತು. 'ಆಯ್ತು, ಈಗ ತಪಸ್ಸು ಆಯ್ತು, ದೇವರು ಪ್ರತ್ಯಕ್ಷನಾಗಿ ಹೇಳಿದ್ದೂ ಆಯ್ತು, ಎಲ್ಲಾ ತಲಿಂದ ತಗದ ಹಾಕಿ ನಿದ್ದಿ ಮಾಡ್ರಿ, ಈಗ ಕಾಲ ಬದಲ ಆಗೇತಿ' ಅಂದಳು. ಕಾಲಾಯ ತಸ್ಮೈ ನಮಃ!! ಎಂದು ಮರಳಿ ನಾನು ನಿದ್ರೆಗೆ ಜಾರಿದೆ. ●